ಜುಲೈ 2024

ಪ್ರೀತಿಯ ಸಹೋದರಿಯರೇ,

ನನ್ನ ಪ್ರೀತಿಯ ಯಜಮಾನರು ಮತ್ತು ನಮ್ಮೆಲ್ಲರ ಪ್ರೀತಿಯ ಮೆಟ್ರೋಪಾಲಿಟನ್ ರವರ ಆಶೀರ್ವಾದದ ಸ್ಮರಣೆಯು ದೇವರಲ್ಲಿ ಐಕ್ಯವಾಗಿ ಇದೀಗ ಎರಡು ತಿಂಗಳುಗಳಾಗಿವೆ. ಒಂದು ಕುಟುಂಭವಾಗಿ, ನಮ್ಮ ಬಿಷಪ್‌ರವರಿಗೂ ಮತ್ತು ನಮ್ಮ ಇಡೀ ಸಭೆಗೂ ಇದು ತುಂಬಾ ಅನಿರೀಕ್ಷಿತವಾಗಿತ್ತು. ನಮ್ಮಿಂದ ದೂರವಾದ ಅವರ ನಿರ್ಗಮನಕ್ಕಾಗಿ ನಾವು ಒಟ್ಟಾಗಿ ದುಃಖಿಸಿದ್ದೇವೆ; ಅವರ ಸಮಾಧಿಯನ್ನು ಕಣ್ಣೀರಿನಿಂದ ನೋಡಿದ್ದೇವೆ; ಮತ್ತು ಅವರ ಜೀವನ, ನಂಬಿಗಸ್ಥ ಸೇವೆಯ ವರ್ಷಗಳು ಮತ್ತು ಕ್ರಿಸ್ತನನ್ನು ತಿಳಿದುಕೊಳ್ಳಲು ಮತ್ತು ಅಗತ್ಯವಿರುವವರಿಗೆ ಸಹಾಯ ಮಾಡಲು ಹಾಗು ಸಭೆಯನ್ನು ಮುನ್ನಡೆಸಲು ಅವರು ಮಾಡಿದ ಎಲ್ಲವನ್ನೂ ನೆನಪಿಸಿಕೊಂಡಿದ್ದೇವೆ.

ನೀವು ಲೈವ್ ಸ್ಟ್ರೀಮಿಂಗ್‌ನಲ್ಲಿ ಕೆಲವೊಂದು ಸೇವೆಗಳ ತುಣುಕುಗಳನ್ನು ವೀಕ್ಷಿಸಿದ್ದೀರಿ ಎಂದು ನಾನು ಅರಿತಿದ್ದೇನೆ. ಮೆಟ್ರೋಪಾಲಿಟನ್ ರವರಿಗೆ ವಿದಾಯ ಹೇಳಲು ಎಷ್ಟು ಜನರು-ದೊಡ್ಡವರು ಮತ್ತು ಚಿಕ್ಕವರು- ಬಂದಿದ್ದರು ಎಂಬುದನ್ನು ನೋಡಿ ನಿಜವಾಗಿಯೂ ಆಶ್ಚರ್ಯಕರವಾಗಿತ್ತು. ಅಯ್ಯನವರ ಜೀವನವು ಸುವಾರ್ತೆಯೊಂದಿಗೆ ಮತ್ತು ಕ್ರಿಸ್ತನ ಪ್ರೀತಿಯೊಂದಿಗೆ ಅನೇಕರ ಜೀವಿತವನ್ನು ತಲುಪುವಲ್ಲಿ ಸಾಧ್ಯವಾಯಿತು. ಅಂತಿಮ ವಿಧಿವಿಧಾನಗಳ ಸೇವೆಗಳ ಸಮಯದಲ್ಲಿ ನೀವು ನಮ್ಮ ಕುಟುಂಬವನ್ನು ದೊಡ್ಡ ಪರದೆಯ ಮೇಲೆ ನೋಡಿದ್ದೀರಿ ಎಂದು ನಾನು ಊಹಿಸುತ್ತೇನೆ. ಇದು ಸುಲಭವಾಗಿರಲಿಲ್ಲ, ಆದರೆ ಅಂತಹ ದುಃಖದ ನಡುವೆಯೂ ನಾವೆಲ್ಲರೂ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಂತೆ ದೇವರು ನಮಗೆ ಅನುಗ್ರಹವನ್ನು ನೀಡಿದನು. ಇಷ್ಟೆಲ್ಲಾ ನೋವುಗಳ ಮಧ್ಯೆದಲ್ಲಿಯೂ ನಮಗಾಗಿ ಪ್ರಾರ್ಥಿಸುತ್ತಾ ನಮ್ಮನ್ನು ನಿಮ್ಮ ಪ್ರಾರ್ಥನೆಗಳಲ್ಲಿ ಜ್ಞಾಪಕಮಾಡಿಕೊಂಡು ನಮ್ಮ ಸಂಗಡ ನಿಂತಿದ್ದಕ್ಕಾಗಿ ನಿಮಗೆ ತುಂಬು ಹೃದಯದ ಧನ್ಯವಾದಗಳು.

ನಾನು ಸಾರಾ (ನಮ್ಮ ಮಗಳು) ಮತ್ತು ಅವರ ಕುಟುಂಬದೊಂದಿಗೆ 40 ದಿನಗಳ ಶೋಕಾಚರಣೆಯನ್ನು ಮುಗಿಸುವವರೆಗೆ ಮತ್ತು ನಮ್ಮ ಪವಿತ್ರ ಸಭೆಗೆ ನೂತನ ಮೆಟ್ರೊಪೊಲಿಟನ್ ರವರನ್ನು ನೇಮಕ ಮಾಡುವವರೆಗೂ ನಾನು ಅಲ್ಲೇ ವಾಸವಾಗಿದ್ದೆ. ನನ್ನ ಪತಿಯ ನಿರ್ಗಮನದ ನಂತರ ನಾನು ಕಾಳಜಿ ವಹಿಸಬೇಕಾದ ಬಹಳಷ್ಟು ವಿಷಯಗಳಿವೆ ಹಾಗು ನನ್ನ ಕುಟುಂಬದ ಕುರಿತಾಗಿ ನೀವು ತೋರಿದ ನಿಮ್ಮ ಎಲ್ಲಾ ಸಹಾಯ ಮತ್ತು ಪ್ರೀತಿಗೆ ನಾನು ಕೃತಜ್ಞಳಾಗಿದ್ದೇನೆ.

ನಾನು ತಿರುಗಿ ಮನೆಗೆ ಬಂದಾಗಿನಿಂದ, ನಮ್ಮ ಚರ್ಚ್‌ಗಳಲ್ಲಿ ನಮ್ಮನ್ನು ಪ್ರೀತಿಸುವ ಮತ್ತು ನಮಗಾಗಿ ಪ್ರಾರ್ಥಿಸುವ ಎಲ್ಲಾ ಸಹೋದರಿಯರ ಬಗ್ಗೆ ಯೋಚಿಸುತ್ತಿದ್ದೇನೆ. ನನ್ನ ಪತಿಯನ್ನು ಕಳೆದುಕೊಂಡ ನಂತರ ನಾನು ಹೇಗಿರುತ್ತೇನೆ? ಎಂದು ನೀವು ಬಹುಶಃ ಚಿಂತಿಸುತ್ತಿರಬಹುದು ಎಂದು ನಾನು ಊಹಿಸುತ್ತೇನೆ.

ಪ್ರೀತಿಯ ಸಹೋದರಿಯರೇ, ಈ ದುಃಖದ ಮತ್ತು ಇಕ್ಕಟ್ಟಿನ ಸಮಯದಲ್ಲಿ ದೇವರ ಕೃಪೆಯಿಂದ ನಾನು ಯಾವ ರೀತಿ ಇದ್ದೇನೆ ಎಂಬುದನ್ನು ನಿಮಗೆ ತಿಳಿಸಲು ಈ ಪತ್ರವನ್ನು ಬರೆಯುತ್ತಿದ್ದೇನೆ. ಕೆಡವಿಬಿದ್ದಿರುವ ಈ ಜಗತ್ತಿನಲ್ಲಿ ನಾವು ವಾಸಿಸುತ್ತಿರುವುದರಿಂದ, ನಾವೆಲ್ಲರೂ ನಮ್ಮ ಜೀವಿತಾವಧಿಯಲ್ಲಿ ಹೋರಾಟಗಳನ್ನು ಮತ್ತು ಕೆಲವು ರೀತಿಯ ನಷ್ಟವನ್ನು ಅನುಭವಿಸುತ್ತೇವೆ. ಹಾಗಾಗಿ ಬಹುಶಃ ನಾನು ಇಂದು ನಿಮಗೆ ಬರೆದಿರುವುದು ಒಂದು ದಿನ ಸಹಾಯ ಮಾಡುತ್ತದೆ.

ನಮ್ಮ ಮೊಮ್ಮಕ್ಕಳು ಸೇರಿದಂತೆ ನಮ್ಮ ಕುಟುಂಬದ ಪ್ರತಿಯೊಬ್ಬರೂ ಮೆಟ್ರೋಪಾಲಿಟನ್ ರವರನ್ನು ತುಂಬಾ ಕಳಕೊಂಡಿದ್ದೇವೆ ಎಂದು ಅನ್ನಿಸುತ್ತಿದೆ. ಅವರು ನಿಜವಾಗಿಯೂ ತುಂಬಾ ಪ್ರಯಾಣ ಮಾಡುತ್ತಿದ್ದರು ಮತ್ತು ಸುರಕ್ಷಿತವಾಗಿ ಮರಳಿ ಮನೆಗೆ ಬರುತ್ತಿದ್ದರು. ಆದರೆ ಈಗ ಮತ್ತೆ ಅವರನ್ನು ಕಾಣಲು ನಾವು ಪರಲೋಕವನ್ನು ತಲುಪುವವರೆಗೆ ಕಾಯಬೇಕಾಗಿದೆ. ನನ್ನ ಪ್ರಕಾರ, ಮೆಟ್ರೋಪಾಲಿಟನ್ ಮತ್ತು ನಾನು

ಮದುವೆಯಾಗಿ ಸುಮಾರು 50 ವರ್ಷಗಳು (12 ದಿನಗಳು ಕಡಿಮೆ), ಮತ್ತು ದೇವರ ಸೇವೆ ಮಾಡಲು ನಾವು ನಮ್ಮ ಜೀವನದ ಈ ಅಂತಿಮ ಅವಧಿಯನ್ನು ಒಟ್ಟಿಗೆ ಕಳೆಯಬಹುದು ಎಂದು ನಾನು ಆಶಿಸಿದ್ದೆ. ಆದರೆ ಈಗ ಅದೆಲ್ಲವೂ ವಿಭಿನ್ನವಾಗಿದೆ, ಅವರ ಈ ಹಠಾತ್ ಅಪಘಾತ ಮತ್ತು ಸಾವು ಕೊನೆಯ ಸಂಭಾಷಣೆಯನ್ನು ಮಾಡಲು ಅಥವಾ ಈ ಭೂಮಿಯ ಮೇಲೆ ಪರಸ್ಪರ ವಿದಾಯ ಹೇಳಲು ಸಹ ನಮಗೆ ಅನುಮತಿಸಲಿಲ್ಲ.

ನನಗೆ ಅರ್ಥವಾಗದ ಹಲವು ವಿಷಯಗಳಿವೆ ಮತ್ತು ಪ್ರಶ್ನೆಗಳಿವೆ, ಅವುಗಳಿಗೆ ಉತ್ತರವನ್ನು ಪಡೆಯಲು ನಿತ್ಯತ್ವದವರೆಗೆ ಕಾಯಬೇಕಾದ. ಅಲ್ಲಿಯವರೆಗೆ, ನಾನು ನಮ್ಮ ಸಾರ್ವಭೌಮ ಕರ್ತನನ್ನು ವಿಶ್ವಾಸಿಸಲು ನಿರ್ಧರಿಸಿದೆ, ಏಕೆಂದರೆ ಆತನು ಒಳ್ಳೆಯವನು ಮತ್ತು ಆತನು ಪ್ರೀತಿ ಸ್ವರೂಪಿ.ಆತನು ಒಂದೇ ಒಂದು ತಪ್ಪನ್ನು ಮಾಡುವುದಿಲ್ಲ ಎಂದು ಆತನ ವಾಕ್ಯವು ಹೇಳುತ್ತದೆ.

ನನ್ನ ಕಣ್ಣೀರು, ನಾನು ಅನುಭವಿಸುವ ನಷ್ಟ ಮತ್ತು ನಾನು ಅನುಭವಿಸುವ ದುಃಖ ಮತ್ತು ನನ್ನ ಈ ನೋವಿನ ಬಗ್ಗೆ ಯೇಸು ಕಾಳಜಿ ವಹಿಸುತ್ತಾನೆಯೇ? ದೇವರ ವಾಕ್ಯವು ನನಗೆ ಭರವಸೆ ನೀಡುತ್ತದೆ ಏಕೆಂದರೆ ಆತನೂ ಈ ಭೂಮಿಯ ಮೇಲೆ ವಾಸಿಸುತ್ತಿದ್ದನು ಮತ್ತು ನಾನು ಹಾದುಹೋಗುವ ಎಲ್ಲವನ್ನೂ ಆತನೂ ಅನುಭವಿಸಿದ್ದಾನೆ. ಇದಲ್ಲದೆ, ಶಿಲುಬೆಯಲ್ಲಿ ಆತನು ನನ್ನ ಎಲ್ಲಾ ದುಃಖ, ನೋವು ಮತ್ತು ವೇದನೆಗಳನ್ನು ಹೊತ್ತುಕೊಂಡನು. ನಾನು ಅತ್ತಾಗ, ಏಕಾಂಗಿಯಾಗಿ ಮತ್ತು ನನ್ನ ಭವಿಷ್ಯದ ಬಗ್ಗೆ ಆಶ್ಚರ್ಯಪಡುವಾಗ ಯೇಸು ಅರ್ಥಮಾಡಿಕೊಳ್ಳುತ್ತಾನೆ.

ನಾನು ಈಗ ಅನುಭವಿಸುತ್ತಿರುವ ದುಃಖವನ್ನು ನನ್ನ ಹೃದಯವು ಯಾವಾಗ ಮೀರುತ್ತದೆ? ದುಃಖಿಸಲು ನಮಗೆ ಸಮಯ ಬೇಕಾಗುವ ರೀತಿಯಲ್ಲಿ ದೇವರು ನಮ್ಮನ್ನು ಸೃಷ್ಟಿಸಿದನು ಆದ್ದರಿಂದ ನಮ್ಮ ಆತ್ಮವು (ಅದರ ಎಲ್ಲಾ ಭಾವನೆಗಳೊಂದಿಗೆ) ಚೇತರಿಸಿಕೊಳ್ಳಬಹುದು ಮತ್ತು ನಷ್ಟದ ನಂತರ ಗುಣಪಡಿಸುವಿಕೆಯನ್ನು ಅನುಭವಿಸಬಹುದು. ಅನೇಕ ಪರೀಕ್ಷೆಗಳನ್ನು ಅನುಭವಿಸಿದ ದಾವೀದನು ತನ್ನ ಸ್ವಂತ ಅನುಭವದಿಂದ ಕೀರ್ತನೆ 23: 3 ರಲ್ಲಿ "ನನ್ನ ಪ್ರಾಣವನ್ನು ಉಜ್ಜೀವಿಸಮಾಡುತ್ತಾನೆ" ಎಂದು ಸಾಕ್ಷಿ ನೀಡಿದನು. ಈ ದಿನಗಳಲ್ಲಿ ನಾನು ಕೀರ್ತನೆ 23 ಮತ್ತು ಇತರ ಎರಡು ಕೀರ್ತನೆಗಳ ಮೂಲಕ ದಿನಕ್ಕೆ ಹಲವಾರು ಬಾರಿ ಪ್ರಾರ್ಥಿಸುತ್ತೇನೆ ಮತ್ತು ನನಗೆ ಮತ್ತು ಆತನಲ್ಲಿ ನಂಬಿಕೆ ಇಟ್ಟ ಎಲ್ಲರಿಗೂ ಈ ಮರುಸ್ಥಾಪನೆಯ ಭರವಸೆಯನ್ನು ಪೂರೈಸಲು ಅವನು ನಂಬಿಗಸ್ತನಾಗಿದ್ದಾನೆ ಎಂದು ನಾನು ಪೂರ್ಣ ಹೃದಯದಿಂದ ನಂಬುತ್ತೇನೆ.

ನಾನು ಒಂದೊಂದು ದಿನವೂ ಕರ್ತಾನನ್ನು ವಿಶ್ವಾಸಿಸುತ್ತಿದ್ದೇನೆ ಆದ್ದರಿಂದ ಮಾತ್ರ ನಾನು ಇದೀಗ ನಿರ್ವಹಿಸಬಲ್ಲೆ ಅಷ್ಟೆ, ಇಲ್ಲದಿದ್ದರೆ ನಾನು ವಿಪರೀತವಾಗಿ ಕುಂದಿಹೋಗುತ್ತಿದ್ದೇನು. ಮತ್ತು ಕರ್ತನು ಪ್ರತಿದಿನ ನನ್ನೊಂದಿಗೆ ನಡೆಯಲು ಮತ್ತು ನನಗೆ ಅಗತ್ಯವಿರುವ ಶಕ್ತಿಯನ್ನು ನೀಡಲು ಆತನು ನಂಬಿಗಸ್ತನಾಗಿದ್ದಾನೆ. ದೈನಂದಿನ ನಾನು ಮಾಡಬೇಕಾದ ಪಟ್ಟಿಯು ಹಿಂದೆಂದಿಗಿಂತಲೂ ಚಿಕ್ಕದಾಗಿದೆ, ಮತ್ತು ಕೆಲವೊಮ್ಮೆ ನಾನು ನಿಲ್ಲಿಸಿ ವಿಶ್ರಾಂತಿ ಪಡೆಯಬೇಕು ಅಥವಾ ನನ್ನ ಮುದ್ದು ಮೊಮ್ಮಕ್ಕಳೊಂದಿಗೆ ಸಮಯ ಕಳೆಯಬೇಕು ಅನ್ನಿಸುತ್ತದೆ.

ನಾನು ದೇವರ ವಾಕ್ಯದಲ್ಲಿ ನನ್ನ ಭರವಸೆಯನ್ನು ಇಡಬಲ್ಲೆ ಮತ್ತು ಅದಕ್ಕೆ ಅಂಟಿಕೊಂಡಿರುವುದು ನನಗೆ ಹೆಚ್ಚು ಸಹಾಯ ಮಾಡುತ್ತದೆ ಮತ್ತು ಬಲವನ್ನು ನೀಡುತ್ತದೆ. ನನ್ನ ಸ್ವಂತ ಜೀವನದ ಸವಾಲಿನ ಸಮಯದಲ್ಲಿ ಮತ್ತು ನಾವು ಸೇವೆಯಲ್ಲಿ ಎದುರಿಸಿದ ಅನೇಕ ಹೋರಾಟಗಳಲ್ಲಿ ನಾನು ಇದನ್ನು ಕಲಿಯಬೇಕಾಗಿತ್ತು ಮತ್ತು ಅಭ್ಯಾಸ ಮಾಡಬೇಕಾಗಿತ್ತು.

ನನ್ನ ಪ್ರೀತಿಯ ಸಹೋದರಿಯರೇ, ನಿಮ್ಮ ಜೀವನದಲ್ಲಿ ನೀವು ಪ್ರಮುಖ ಪ್ರಯೋಗವನ್ನು ಎದುರಿಸುವ ಮೊದಲು ಇದನ್ನು ಕಲಿಯಲು ನಾನು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ.
ನಾನು ನಂಬಿಕೆ ಇಡುತ್ತಿರುವ ವೇದಭಾಗಗಳಲ್ಲಿ ಯೇಸುವಿನ
ಒಂದು ವಾಗ್ದಾನವಾಗಿದೆ: "ನಾನು ನಿನ್ನನ್ನು ಎಂದಿಗೂ ಕೈಬಿಡುವುದಿಲ್ಲ, ಎಂದಿಗೂ ತೊರೆಯುವುದಿಲ್ಲ" (ಇಬ್ರಿಯ 13:5). ಎಂಬ ಈ ವಾಕ್ಯವು ನನಗೆ ಹೆಚ್ಚು ಧೈರ್ಯವನ್ನು ಆತ್ಮಸ್ಥೈರ್ಯವನ್ನು ನೀಡುತ್ತದೆ. ಭವಿಷ್ಯದಲ್ಲಿ ನನಗೆ ಏನಾಗುತ್ತದೆ ಎಂಬ ಭಯವನ್ನು ಇದು ದೂರ ಮಾಡುತ್ತದೆ.

ನನ್ನ ಕುರಿತಾಗಿರುವ ದೇವರ ಪ್ರೀತಿ ಮತ್ತು ಆತನ ಅನುಗ್ರಹದ ಕುರಿತು ನಾನು ನಿಮಗೆ ಹೇಳಲು ಬಯಸುತ್ತೇನೆ. ನನ್ನ ಪತಿಯವರು ಕರ್ತನೊಂದಿಗೆ ಇರಲು ಹೋದ ದಿನದಿಂದ ಇಲ್ಲಿಯವರೆಗೆ, ನನ್ನ ಸ್ವರ್ಗೀಯ ತಂದೆಯು ನನ್ನ ಹೃದಯವನ್ನು ಅಲಂಕರಿಸಿದ್ದಾರೆ ಮತ್ತು ಅವರ ಅತ್ಯುನ್ನತ ಶಾಂತಿಯಿಂದ ನನ್ನನ್ನು ಸುತ್ತುವರೆದಿದ್ದಾರೆ. ನಾನು ಕಣ್ಣೀರು ಸುರಿಸಿದರೂ, ಈ ಶಾಂತಿಯು ನನಗೆ ರಾತ್ರಿಯಲ್ಲಿ ಒಳ್ಳೆಯ ನಿದ್ರೆ ಮಾಡಲು ನನಗೆ ಸಹಾಯ ಮಾಡುತ್ತದೆ ಮತ್ತು ನನ್ನ ಹೃದಯದಲ್ಲಿ ಯಾವುದೇ ಭಯವಿಲ್ಲ. ನನ್ನ ಕುರಿತು ದೇವರ ಕಾಳಜಿ ಮತ್ತು ಕರುಣೆಯ ಬಗ್ಗೆ ನನಗೆ ತುಂಬಾ ಅರ್ಥವಾಗಿದೆ.

ನನ್ನ ಪತಿಯವರು ಈ ಲೋಕದಲ್ಲಿ ಕಳೆದುಹೋದವರನ್ನು, ದಾರಿತಪ್ಪಿದವರನ್ನು ಸಂಧಿಸಲು, ಅವರು ಹೊಂದಿದ್ದ ಅವರ ದರ್ಶನಕ್ಕಾಗಿ ಮತ್ತು ಈ ಭೂಮಿಯ ಮೇಲಿನ ತನ್ನ ಜೀವನದ ಕೊನೆಯ ಕ್ಷಣಗಳವರೆಗೂ ಕರ್ತನ ಸೇವೆ ಮಾಡಲು ಅವರ ಕರೆವಿಕೆಗೆ ನಂಬಿಗಸ್ಥರಾಗಿ ಇದ್ದುದ್ದಕ್ಕಾಗಿ ನಾನು ದೇವರಿಗೆ ಕೃತಜ್ಞಳಾಗಿದ್ದೇನೆ. ಬಹುಶಃ ನಾವು ಈಗ ಅವರನ್ನು ನೋಡಲು ಸಾಧ್ಯವಾದರೆ, ಅವರ ಎಲ್ಲಾ ವರ್ಷಗಳ ಶ್ರಮೆಗಳು, ಅಂತ್ಯವಿಲ್ಲದ ಪ್ರಯಾಣಗಳು, ಹೋರಾಟಗಳು ಮತ್ತು ಶೋಧನೆಗಳು ಇವೆಲ್ಲದಕ್ಕೂ ನಮ್ಮ ಸಂರಕ್ಷಕನನ್ನು ಮುಖಾಮುಖಿಯಾಗಿ ಭೇಟಿಯಾಗುವುದು ಯೋಗ್ಯವಾದದ್ದು ಎಂದು ಅವರು ನಮಗೆ ಹೇಳುತ್ತಿದ್ದರು ಎಂದು ನಾನು ಊಹಿಸುತ್ತೇನೆ.

ಮೆಟ್ರೋಪಾಲಿಟನ್ ಆಗಾಗ್ಗೆ ನಮ್ಮನ್ನು ಸುತ್ತುವರೆದಿರುವ ಸಾಕ್ಷಿಗಳ ದೊಡ್ಡ ಮೇಘದ ಬಗ್ಗೆ ಇಬ್ರಿಯ 12: 1 ರಿಂದ ಮಾತನಾಡುತ್ತಿದ್ದರು. ಈಗ ಅವರು ಈ ಮೋಡದೊಳಗೆ ಸೇರಿಕೊಂಡಿದ್ದಾರೆ ಎಂದು ನಾನು ನಂಬುತ್ತೇನೆ, ಮತ್ತು ನಾವು ಅವರ ಮಾದರಿಯನ್ನು ಅನುಸರಿಸುವುದರ ವಿಷಯವಾಗಿ ಮುಂದುವರಿಸುವುದನ್ನು ಅವರು ಕುತೂಹಲದಿಂದ ನೋಡುತ್ತಿದ್ದಾರೆ ಹಾಗು ಸಭೆಯಾದ ನಾವು ಅವರು ನಮಗೆ ಬಿಟ್ಟುಹೋದ ದರ್ಶನ ಮತ್ತು ನಿರ್ದೇಶನವನ್ನು ಪೂರೈಸಬೇಕಾಗಿದೆ.

ಆತ್ಮೀಯ ಸಹೋದರಿ, ನಾವು ಶಾಶ್ವತತೆಗಾಗಿ ಬದುಕಲು ಆಯ್ಕೆ ಮಾಡಿದರೆ ಮತ್ತು ಹಿಂದೆಂದೂ ಕೇಳಿರದವರಿಗೆ ಸುವಾರ್ತೆಯನ್ನು ಕೊಂಡೊಯ್ಯಲು ನಮ್ಮ ಜೀವನವನ್ನು ತೊಡಗಿಸಿಕೊಂಡರೆ ನಾವು ನಮ್ಮ ಕರ್ತನಾದ ಯೇಸುವಿಗೆ ಮತ್ತು ನಮ್ಮ ಆಧ್ಯಾತ್ಮಿಕ ತಂದೆಗೆ ಅತ್ಯಂತ ಗೌರವ ಮತ್ತು ಸಂತೋಷವನ್ನು ತರುತ್ತೇವೆ. ನಮ್ಮ ಮೆಟ್ರೋಪಾಲಿಟನ್ ಥಿಯೋಫಿಲಸ್ ಮತ್ತು ನಮ್ಮ ಎಲ್ಲಾ ಬಿಷಪ್‌ಗಳು ಮತ್ತು ನಾಯಕರಿಗಾಗಿ ನಾವು ನಿಷ್ಠೆಯಿಂದ ಪ್ರಾರ್ಥಿಸೋಣ, ಅವರು ನಮ್ಮ ಚರ್ಚ್ ಅನ್ನು ಮುನ್ನಡೆಸುವಾಗ ದೇವರು ತನ್ನ ಬುದ್ಧಿವಂತಿಕೆಯಿಂದ ಅವರಿಗೆ ಮಾರ್ಗದರ್ಶನ ನೀಡುತ್ತಾನೆ. ಸಹೋದರಿಯರಾಗಿ, ನಾವು ಅವರಿಗೆ ಮತ್ತು ನಮ್ಮ ಚರ್ಚ್‌ಗೆ ಆಶೀರ್ವಾದ ಮತ್ತು ಪ್ರೋತ್ಸಾಹವನ್ನು ಬಯಸಬೇಕು.

ಭರವಸೆಯಿಂದ ಬದುಕೋಣ.

ನನ್ನ ಪ್ರೀತಿಯ ಸಹೋದರಿಯರೇ, ಈ ಪತ್ರದಲ್ಲಿ ನಾನು ನನ್ನ ಕೊನೆಯ ಎರಡು ತಿಂಗಳ ಪ್ರಯಾಣವನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ. ಪುನರುತ್ಥಾನದ ಭರವಸೆಯು ಒಂದು ದಿನ ನಮ್ಮ ದುಃಖವನ್ನು ಸಂತೋಷವಾಗಿ ಪರಿವರ್ತಿಸುತ್ತದೆ. ನಾವು ಮೆಟ್ರೋಪಾಲಿಟನ್ ಮತ್ತು ನಮಗೆ ಮೊದಲು ಹೋದವರೆಲ್ಲರೊಂದಿಗೆ ಒಟ್ಟಿಗೆ ಇರುತ್ತೇವೆ. ಈ ಬಾರಿ ಅದು ಶಾಶ್ವತವಾಗಿ ಮತ್ತು ನಮ್ಮ ರಕ್ಷಕನ ಸನ್ನಿಧಾನದಲ್ಲಿ ಕಾಣಿಸಲ್ಪಡುತ್ತದೆ.

ಯೇಸುವಿನಲ್ಲಿ ನಾನು ನಿಮ್ಮನ್ನು ಪ್ರೀತಿಸುತ್ತೇನೆ ಮತ್ತು ನಾನು ನಿಮಗಾಗಿ ಪ್ರಾರ್ಥಿಸುತ್ತೇನೆ ಎಂಬುದನ್ನು ದಯವಿಟ್ಟು ತಿಳಿದುಕೊಳ್ಳಿರಿ.

ಕ್ರಿಸ್ತನಲ್ಲಿ ನಿಮ್ಮ ಸಹೋದರಿ,
ಗಿಸೆಲಾ ಯೋಹಾನ್ನಾನ್